ತಲೆ ಬೋಳ್ಸಿದ್ದಾಯ್ತು. ಪಶ್ಚಿಮ ವಾಹಿನೀಲಿ ತೇಲಿಸಿದ್ದಾಯ್ತು. ಎಲ್ಲಾ ದಾನಗಳು ಸಾಲಿಗ್ರಾಮ, ಹಾಸಿಗೆ, ಪಂಚಪಾತ್ರೆ, ಭೂಮಿ, ಹಸು, ಕರು ಎಲ್ಲ ಕೊಟ್ಟಿದ್ದಾಯ್ತು. ಕೊನೇಗೆ ವೈತರಣೀ ದಾಟೋದಕ್ಕೆ ಅಂತ ಹೋರೀನೂ ಬಿಟ್ಟಿದ್ದಾಯ್ತು. ಎಲ್ಲ ಸಾಂಗವಾಗಿ ನೆರವೇರಿತು. ದೊಡ್ಡಪ್ಪನ್ನ ಪೆದ್ದು ದದ್ದು ಮಗ ಸಕಲ ಕ್ರಿಯೆಗಳನ್ನೂ ಶ್ರದ್ಧೆಯಿಂದ ಮಾಡಿ ಸೈ ಅನ್ನಿಸ್ಕೊಂಡ. ದೊಡ್ಡಮ್ಮ ಜೀವನದಲ್ಲಿ ಮೊದಲ ಬಾರಿಗೆ ಮಗನ ಬಗ್ಗೆ ಒಂದು ಒಳ್ಳೆ ಮಾತಂದ್ರು.

'ಹೆತ್ತದ್ದಕ್ಕೆ ಸಾರ್ಥಕ ಆಯ್ತು ನೋಡು. ಶ್ರದ್ಧೆಯಿಂದ ಶ್ರಾದ್ಧವಾಯ್ತು. ಅವರಿಗೆ ಮುಕ್ತಿ ಸಿಕ್ತು.' ಕಣ್ಣಲ್ಲಿ ತೊಟ್ಟು ನೀರಾಡಿತ್ತು. ಜರೀ ಸೀರೆ ಸೆರಗಲ್ಲಿ ಮುಖ ಮೂಗು ಕಣ್ಣು ಒರೆಸಿಕೊಂಡ್ರು. ಬಳೆ ಝುಣ ಝುಣ ಅಂತು.

* * *

ನನ್ನ ಟೈಮ್ ಮುಗಿದು ನಾನು ಮೇಲೆ ಹೋಗೋ ಹೊತ್ತಿಗೆ ಇಪ್ಪತ್ತು ವರ್ಷವಾಗಿತ್ತು.

ಅಷ್ಟೊತ್ತಿಗೆ ದೊಡ್ಡಪ್ಪನ ಮಗ, ನಮ್ಮ ದೊಡ್ಡಮ್ಮ ಅವರೂ ಹೋಗಾಗಿತ್ತು. ಮೇಲೆ ಹೋದೆ ನನ್ನ ಸರದೀಗೆ ಕಾಯ್ತಾ ನಿಂತಿದ್ದೆ. ದೂರದಲ್ಲಿ ಪಾಪ ಒಂದಾತ್ಮ ಒಂಟಿ ಕೂತಿತ್ತು. ಮೊದಲಿಗೆ ಗುರ್ತು ಸಿಗಲಿಲ್ಲ ದಿಟ್ಟಿಸಿ ನೋಡ್ದೆ. ಗುರ್ತು ಸಿಕ್ತು.

'ನಂ ದೊಡ್ಡಪ್ಪ'

ಒಬ್ರೇ ಕಲ್ಲು ಬೆಂಚಿನ ಮೇಲೆ ಕೊರೆಯೋ ಚಳೀಲಿ ಆವಿಯಾಗಿ ಕೂತಿದ್ರು. ಶ್ರಾದ್ಧ ಸಾಂಗವಾಗಿ ನೆರವೇರಿತ್ತು. ಲೆಕ್ಕಕ್ಕೆ ನೋಡಿದರೇ ದೊಡ್ಡಪ್ಪನ್ನ ಚಿನ್ನದ ಪಲ್ಲಕ್ಕೀಲಿ ಹೊತ್ತು ಮುಕ್ತಿಗೆ ಕಳಿಸ ಬೇಕಿತ್ತು. ಇವರು ವೈತರಣೀನೂ ದಾಟದೇ ದಂಡೇಲಿ ಕೂತಿದ್ದಾರೆ. ಆಲ್ಮೋಸ್ಟ್ ಹತ್ತು ವರ್ಷ.

ಹೋಗಿ ಕೇಳಿದೆ!

'ಏನಾಯ್ತು ದೊಡ್ಡಪ್ಪ? ಮಗ ಎಲ್ಲ ಚೆನ್ನಾಗೆ ಮಾಡಿದ್ನಲ್ಲ?'

'ಚನ್ನಾಗೇ ಮಾಡ್ದ! ತಂದೆ ಮಾತು ಚಾಚೂ ತಪ್ಪದೆ ಕೇಳಿದ ಅಂತ ಅವನು ಬರ್ತಿದ್ದ ಹಾಗೇ ವ್ಯವಸ್ಥೆ ಮಾಡಿ ಅವನ್ನ ಕಳಿಸಿದ್ರು. ಇವಳೂ ಬಂದ್ಲು. ಕೊನೇವರೆಗೂ ನೋಡ್ಕೊಂಡಳಲ್ಲ. ಆ ಪುಣ್ಯಕ್ಕೆ ಇವಳಿಗೂ ತಕ್ಷಣವೇ ಮುಕ್ತಿ. ಅಲ್ಲ! ಅರವತ್ತು ವರ್ಷ ಸಾಕಿದ್ದೀನಿ. ನೋಡ್ಲೇ ಇಲ್ಲ ಕಣೋ ನನ್ನ ಕಡೆ. ಅಹಂಕಾರದಲ್ಲಿ ಅಸಡ್ಡೆಯಿಂದ ನನ್ನ ಕೇವಲವಾಗಿ ಪರಿಗಣಿಸಿ ಬಳುಕ್ತಾ ಹೋಗ್ತಾಳೆ. ಏನು? ರಂಭೆ? ನಾನು ಕಟ್ಟಿಕೊಂಡಿದ್ದಕ್ಕಲ್ವಾ ಅವಳಿಗೆ ಬದುಕು?'

'ಮತ್ತೆ ನಿನ್ನ ಕತೆ?'

'ಇಲ್ಲಿ ಬಂದ ಮೇಲೆ ಅರ್ಥ ಆಯ್ತು ನೋಡು, ಕರ್ಮಕ್ಕೆ ಮುಕ್ತಿ ಅಂತಾರೆ! ಕರ್ಮ ಅಂದ್ರೆ ಸತ್ತಮೇಲೆ ಮಾಡ್ತಾರಲ್ಲ ಅದಲ್ವೋ! ಇದ್ದಾಗ ಬದುಕಿಗೆ ನಾವೇನು ಮಾಡ್ತೀವಿ ಅದಂತೆ ಕರ್ಮ! ಸಾವಿಂದು ಕರ್ಮ ಅಲ್ವಂತೆ ಬದುಕಿನ ಕರ್ಮವಂತೆ! ಹೇಳಬೇಕಲ್ಲವಾ?' ಗೊಣಗಿದ್ರು.

ಮೌನಕ್ಕೆ ಬಿದ್ದೆ. ಅವರೇ ಮುಂದುವರೆಸಿದ್ರು.

'ಸಾಲಿಗ್ರಾಮ ದಾನ ಕೊಟ್ಟ. ಕೃಷ್ಣ ದೇವಸ್ಥಾನದ ಭಟ್ರ ಮುಕ್ತೀಗಾಯ್ತು ನೋಡು. ದೇವಸ್ಥಾನದಲ್ಲಿ ಹುಂಡಿಕಾಸು ಕದ್ದು ಭಟ್ರ ಮೇಲೆ ಹಾಕಿದ್ದೆ. ಆ ಸಭ್ಯ ಆತ್ಮಹತ್ಯೆ ಮಾಡ್ಕೊಂಡಿದ್ದ. ಅಲ್ಲಿ ನನ್ನ ಮಗ ಸಾಲಿಗ್ರಾಮ ದಾನ ಕೊಡ್ತಿದ್ದ ಹಾಗೆ, ಅದನ್ನ ಭಟ್ರ ಲೆಕ್ಕಕ್ಕೆ ಬರೆದು ಅವರನ್ನ ಮುಕ್ತಿಗೆ ಕಳಿಸಿದ್ರು.

ಎರಡೆಕ್ರೆ ಜಮೀನು ದಾನ ಕೊಟ್ಟ ಅರಳೀಕಟ್ಟೆ ಶಾರದಮ್ಮನಿಗೆ ಮುಕ್ತಿ ಆಯ್ತು. ಒಂದು ರಾತ್ರೆ ಅಲ್ಲಿ ಮಲಗಿದ್ದೋನು, ಬೆಳಗಿನ ಜಾವ ಅವಳದ್ದೊಂದು ಸೈಟು ಪತ್ರ ಕದ್ದು ಫೋರ್ಜರಿ ಮಾಡಿ ಮಾರಿದ್ದೆ. ಆ ದುಡ್ಡು. ಅದರಲ್ಲಿ ಆ ಜಮೀನು. ಅವಳ ಮುಕ್ತಿಗಾಯ್ತು ನೋಡು. ಪಾಪ ಸಾಯೋವರ್ಗೂ ಅವಳಿಗೆ ಗೊತ್ತೆ ಆಗಿರಲಿಲ್ಲ ಕಣೋ. ನಾನು ಬಂದಾಗ ಇಲ್ಲಿದ್ಲು. ಅಲ್ಲಾದ್ರೆ ಪೊರಕೆ ತಗೊಂಡು ಬಾರ್ಸಿರೋಳು. ಇಲ್ಲಿ ಪೊರಕೆ ಇಲ್ಲ ನೋಡು ಹಾಗಾಗಿ ನಾನು ಬದುಕ್ಕೊಂಡೆ ಅಂದ್ರು. ಒಂದೊಂದು ದಾನಕ್ಕೆ ಒಬ್ಬೊಬ್ಬರಿಗೆ ಮುಕ್ತಿ ಆಯ್ತು. ಕೊನೇಗೆ ಆ ಹೋರಿ ಬಿಟ್ಟ ಅದು ಇಲ್ಲಿ ಬಂದಾಗ ನಂಬೊಲ್ಲ ನೀನು ಒಂದು ಸಾವಿರ ಜನ ಅದರ ಬಾಲ ಹಿಡಿದು ವೈತರಣಿ ದಾಟಿದರು. ಪಾಪ ಮೂರು ಟ್ರಿಪ್ ಮಾಡ್ತು ನೋಡದು. ಚೀಟಿ ಕಾಸಿಂದು ಹೋರಿ ಒಂದೊಂದು ಟ್ರಿಪ್ಪು ಮುಗಿಸಿ ಬಂದಾಗ್ಲೂ ನನ್ನನ್ನ ನೋಡಿ ಗುಟುರು ಹಾಕ್ತಿತ್ತು. ಎಲ್ಲ ಅವರಿವರ ಕಾಸು. ಅದರಲ್ಲಿ ದಾನ. ಅವರಿಗೆಲ್ಲ ಮುಕ್ತಿ ಆಯ್ತು. ಒಂದು ಕವಡೆ ನಾನು ದುಡಿದದ್ದಲ್ಲ. ನನ್ನನ್ನ ಇಲ್ಲಿ ಕೂರಿಸಿದ್ರು.'

'ಮತ್ತೆ ಮುಂದೆ'

'ಮತ್ತೆ ಹೋಗಬೇಕಂತೆ! ಮುಂದಿನ ಶುಕ್ರವಾರ ಮೊಮ್ಮಗನ ಹೆಂಡತಿ ಗರ್ಭದಲ್ಲಿ ಅಂಕುರವಾಗಬೇಕು. ಇನ್ನೊಂದು ಛಾನ್ಸ್ ಕೊಡ್ತಿದ್ದಾರೆ. ಮಾನವಾಗಿ ಬದುಕಿದ್ರೆ ಮುಕ್ತಿ'.

ಅಷ್ಟರಲ್ಲಿ ಯಾರೋ ಕೂಗಿದ್ರು.

'ಯಾರ್ರೀ ಇನ್‌ಕಮ್ ಟ್ಯಾಕ್ಸ್‌ನೋರು?'

ನಾನೆದ್ದೆ, ಅಂದೆ.

'ನನಗೆ ಮಕ್ಕಳಿಲ್ಲ. ಕರ್ಮ ಯಾರೂ ಮಾಡ್ಲಿಲ್ಲ. ಹಾಗಾಗಿ ಮುಕ್ತಿ ಇಲ್ಲ'

ಅದಕ್ಕವನಂದ–

'ಬಾಳ ಜನ ಅಡ್ವೊಕೇಟ್ಸು ಮತ್ತೆ ಚಾರ್ಟೆಡ್ ಅಕೌಂಟೆಂಟ್ಸು ಬಂದಿದ್ದಾರೆ. ಮಾತೆತ್ತಿದರೇ ಕಾನೂನು ಮಾತಾಡ್ತಾರೆ ಬಾಯಿಗೆ ಬಂದಿದ್ದೇ ಲೆಕ್ಕ ಕೊಡ್ತಿದ್ದಾರೆ. ಭಗವಂತನಿಗೆ ತಲೆ ಕೆಟ್ಟಂಗಾಗಿದೆ ನಿಮ್ಮನ್ನ ಕರ್ಕೊಂಬರಕ್ಕೆ ಹೇಳಿದರು. ಸಹಾಯಕ್ಕೆ ಬೇಕಂತೆ.'

'ಅಲ್ಲಿ ಮಾಡಿ ಸಾಕಾಗಿತ್ತು. ಇಲ್ಲೂ ಅದೇನಾ?'

'ಅಲ್ಲಿ ರಿಸಲ್ಟ್ ಝೀರೋ. ಇಲ್ಲಿ ಹಾಗಲ್ಲ. ಖಂಡಿತ ರಿಸಲ್ಟ್ ಬರತ್ತೆ. ನಡೀರಿ' ಅಂದ ಹೊರಟೆ.

ಶುಕ್ರವಾರ ದೊಡ್ಡಪ್ಪನ ಅಂಕುರ ಅವರ ಮೊಮ್ಮಗನ ಹೆಂಡತಿ ಗರ್ಭದಲ್ಲಾಯ್ತು. ಅದಾದ ಒಂಬತ್ತು ತಿಂಗಳು ಒಂಬತ್ತು ದಿನಕ್ಕೆ ದೊಡ್ಡಪ್ಪ ಮಗನ ಮೊಮ್ಮಗನಾಗಿ ಹುಟ್ಟಿದರು. ನೋಡಿ ಮೊಮ್ಮಗ ಅಂದ

'ಥೇಟ್ ಅಜ್ಜಾನೇ! ಅದೇ ಛಾಯೆ!'

ಅವಂದೇ ಹೆಸರಿಟ್ಟರು.

ಪೇಪರ್‌ನಲ್ಲಿ ಸುದ್ದಿ ಬಂದಿತ್ತು. ಅದ್ಯಾರೋ ಹದಿನಾಲ್ಕು ವರ್ಷದ ಬಾಲಕನೊಬ್ಬ ಅದ್ಯಾವುದೋ ಬ್ಯಾಂಕಿನ ಸೆಕ್ಯೂರಿಟಿ ಕೋಡ್ ಬ್ರೀಚ್ ಮಾಡಿ ನೂರಾರು ಅಕೌಂಟ್ಸಗಳ ಪಾಸ್ವರ್ಡ್ ಕದ್ದು, ಕೋಟ್ಯಾಂತರ ರೂಪಾಯಿ ಬೇನಾಮಿ ಅಕೌಂಟ್ ಗೆ ಟ್ರಾನ್ಸಫರ್ ಮಾಡಿ, ಡ್ರಾ ಮಾಡಿದ್ನಂತೆ. ಹುಡ್ಗ ಸಿಕ್ಕ. ಹಣದ ಸುಳಿವಿರಲಿಲ್ಲ. ಅವರಪ್ಪನ್ನ ಕೇಳಿದರೆ

'ಲೋಫರ್ರು. ನನಗೂ ಸಾಕಾಗಿದೆ. ಒಳಗ್ಹಾಕಿ' ಅಂತಾರಂತೆ.

ಶಿಕ್ಷೆ ಕೊಡಕ್ಕೆ, ಕಾನೂನು ಇಲ್ವಂತೆ. ಅವನು ಅಪ್ರಾಪ್ತ. ಹಣ ಎಲ್ಲಿದೆ ಅಂದ್ರೆ ಬಾಯಿ ಬಿಡ್ತಿಲ್ಲ. ಒದ್ದು ಹೇಳಿಸೋಣ ಅಂದ್ರೆ ಹ್ಯೂಮನ್ ರೈಟ್ಸ್‌ನೋರ ಭಯ. ಸತ್ಯ ಎಲ್ಲರಿಗೂ ಗೊತ್ತಿತ್ತು. ಅವನು ಕದ್ದ ಹಣಾನ ಅವರಪ್ಪ ಲೆಕ್ಕಕ್ಕೆ ತೋಗೊಂಡು ಟ್ಯಾಕ್ಸ್ ಕಟ್ಟಿ ವೈಟ್ ಮಾಡ್ಕೊಂಡಿದ್ರು. ಆದರೆ ಪ್ರೂವ್ ಮಾಡಕ್ಕಾಗಲ್ಲ. ಅಲ್ಲೀಗೆ ರಿಕವರಿ ಆಗಲ್ಲ. ಅಪ್ಪ ಆಚೆ ನೆಮ್ಮದಿಯಾಗಿದ್ದಾನೆ. ಮಗ ಒಳಗಿದ್ದಾನೆ ಮತ್ತೆ ನೆಮ್ಮದಿಯಾಗಿ. ಇವರೇ ಅವನಿಗೆ ದಿನಕ್ಕೆ ಮೂರು ಸರ್ತಿ ಮನೆಯಿಂದ ಕ್ಯಾರಿಯರ್ ಹೊಡೀತಿದ್ದಾರೆ. ಅಲ್ಲೇ ಸ್ವಲ್ಪ ಖರ್ಚು ಮಾಡಿ ಎಲ್ಲ ಫೆಸಿಲಿಟಿಗಳು ಕೊಟ್ಟಿದ್ದಾರೆ. ಟಿ.ವಿ, ಎ.ಸಿ, ಕಾಟು ಎಲ್ಲ. ಇಲ್ಲೀಗಿಂತ ಅಲ್ಲೇ ಸೌಕರ್ಯ ಹೆಚ್ಚಂತೆ. ಸೇಫು ಅಂತಾರೆ. ಗುಂಡು, ಗಾಂಜಾ, ಅಫೀಮು ಎಲ್ಲ ಸಿಗತ್ತಂತೆ. ಅದೇನೊ ರಿಪಬ್ಲಿಕ್ ಡೇಗೆ ಗುಡ್ ಬಿಹೇವಿಯರ್ ಅಂತ ರಿಲೀಸು ಮಾಡ್ತಾರಂತಪ್ಪ ಈ ವರ್ಷ. ಹಾಗಂತ ಸುದ್ದಿ ಇತ್ತು. ಕದ್ದವರು, ಅದನ್ನ ಜೀರ್ಣಿಸಿಕೊಂಡವರು ನೆಮ್ಮದಿಯಾಗಿದ್ದಾರೆ. ಕಳ್ಕಂಡ ಜನ ಉಸ್ ಅಂತಿದ್ದಾರೆ.

* * *

ಭಗವಂತನ ಎದುರು ಪೇಪರ್ ಇಟ್ಟೆ.. ಅವನಂದ.

'ಗೊತ್ತು' ನಾನಂದೆ.

'ನನ್ನ ದೊಡ್ಡಪ್ಪ'

'ಹೌದು'

'ಮತ್ತೆಲ್ಲಿ ಮುಕ್ತಿ. ಮತ್ತದೇ'

'ಏನ್ಮಾಡ್ತೀಯ, ಇಲ್ಲೀದರ ನೆನಪು ಉಳಿಸಿದರೆ, ಸುಖವೇ ಪಡಲ್ಲ. ಎಲ್ಲ ನಶ್ವರ ಅಂತ ಅಂದ್ಕೊಂಡು, ಹುಟ್ಟು ಹಾಕಿದ್ದೇ ಪ್ರಯೋಜನ ಇಲ್ಲ ಅನ್ನೋಹಾಗೆ ಬದುಕ್ತಾರೆ. ಇಲ್ಲೀದನ್ನ ಮರೆಸಿ ಕಳಿಸಿದರೆ, ಮತ್ತದೇ ಕರ್ಮ ಮಾಡ್ತಾರೆ.'

'ಕೊನೆ'

'ಇಲ್ಲ'

'ಎಷ್ಟು ದಿನ?'

'ನೋಡು ಇಲ್ಲಿ ನನ್ನ ಟರ್ಮ್ ಮುಗಿದು ನಾನು ಹೋಗ್ತೀನಿ. ಇನ್ನೊಬ್ಬ ಬರ್ತಾನೆ ಭಗವಂತ!

ಭಗವಂತರು ಬದಲಾಗ್ತಾ ಹೋಗ್ತಾರೆ. ಮನುಷ್ಯ ಹಾಗೇ ಇರ್ತಾನೆ.

